

# ಕಥೆಯನ್ನು ಹುಡುಕಿ ಹೊರಟ ಕಥೆಗಳು

ಬಿ.ಎಸ್.ಎನ್.ಎಲ್.ನಲ್ಲಿ ಕೆಲಸ ಮಾಡುವ ರಾಘವೇಂದ್ರ ಉಡುಪರು ಅಲಸೂರಿನ ತಮ್ಮ ಆಫೀಸಿನಿಂದ ಜಯನಗರ ಐದನೇ ಬ್ಲಾಕಿನಲ್ಲಿರುವ ಕ್ವಾರ್ಟರ್ಸ್‌ಗೆ ಸಂಜೆ ವಾಪಸಾದಾಗ ಏಳೂಮೂವತ್ತು. ಮೆಟ್ರೊ ರೈಲು ಬಂದ ಮೇಲೆ ಓಡಾಟಕ್ಕೆ ಸ್ವಲ್ಪ ಅನುಕೂಲವಾಗಿದೆ. ಮನೆಗೆ ಬಂದವರು ಕೈ, ಕಾಲು, ಮುಖ ತೊಳೆದು ಬಿಸ್ಕತ್ತು, ಚಹಾ ಸ್ವೀಕರಿಸಿ ಕಾಂಪೌಂಡಿನಲ್ಲಿ ಒಂದು ವಾಕ್ ಹೊರಟರು. ಅದು ಅವರ ದಿನದ ಪದ್ಧತಿ. ಬೆಳಿಗ್ಗೆ ಮತ್ತು ಸಾಯಂಕಾಲ ಆ ಸುಂದರ ವಿಶಾಲ ಕಾಂಪೌಂಡಿಲ್ಲಿ ಅರ್ಧ ತಾಸು ವಾಕ್ ಮಾಡುತ್ತಾರೆ. ಅದೇ ಹೊತ್ತಿಗೆ ಅವರು ನಿತ್ಯವೂ ಹೇಳಬೇಕಾದ ಮಂತ್ರಗಳನ್ನೂ ಮನಸಿನಲ್ಲೇ ಹೇಳಿಕೊಳ್ಳುತ್ತಾರೆ. ವಾಕ್ ಮುಗಿಸಿ ಇನ್ನೇನು ಮನೆಗೆ ಹೋಗಬೇಕು ಎನ್ನುವಷ್ಟರಲ್ಲಿ ರಾಮಾನುಜಂ ಸಿಕ್ಕರು.

ರಾಮಾನುಜಂ ಅವರು ಡಬ್ಲ್ಯು.ಎಂ.ಎಸ್. ಕಾಂಪೌಂಡ್‌ನ ಒಂದು ತುದಿಯಲ್ಲಿರುವ ಸ್ಯಾಟ್‌ಕಾಂ ಬಿಲ್ಡಿಂಗಿನಲ್ಲಿ ಕೆಲಸ ಮಾಡುತ್ತಾರೆ. ಅವರೂ, ಉಡುಪ ಅವರೂ ಸಮಯ ಸಿಕ್ಕಾಗ ಒಂದಷ್ಟು ಹೊತ್ತು ಹರಟೆ ಹೊಡೆಯುತ್ತಾರೆ. ಉಡುಪರು ಉತ್ಸಾಹದಲ್ಲಿದ್ದರು. ರಾಮಾನುಜಂ ಕೂಡ 'ಬಿಡುವಾಗಿದ್ದೀರಾ! ಎಲ್ಲಿಯಾದರೂ ಹೋಗುವುದಿದೆಯೇ?' ಎಂದು ವಿಚಾರಿಸಿದರು. ಅದು ಹರಟೆಗೆ ಒಂದು ಮುಕ್ತ ಆಹ್ವಾನ! ಕಾಫಿಪ್ರಿಯ ರಾಮಾನುಜಂ ಇಂದು ಆಫೀಸಿನಿಂದ ಬರುವಾಗ ಒಬ್ಬ ಗೆಳೆಯರು ಬಲವಂತವಾಗಿ ಹೋಟೆಲ್‌ಗೆ ಕರೆದೊಯ್ದರಂತೆ. ಅವರು ಕಾಫಿ ಕೊಡಿಸಿದ್ದರಿಂದ ರಾಮಾನುಜಂ ಇನ್ನೂ ಎರಡು ತಾಸು ಜಗತ್ತನ್ನು ನಿರ್ವಿಘ್ನವಾಗಿ ಎದುರಿಸುವ ಶಕ್ತಿ ಪಡೆದಿದ್ದರು! ಆಟದ ಮೈದಾನದ ಸುತ್ತಲೂ ಕಲ್ಲು ಬೆಂಚುಗಳಿವೆ. ಸಾಮಾನ್ಯವಾಗಿ ಗೆಳೆಯರಿಬ್ಬರು ಅಲ್ಲೇ ಒಂದಿಷ್ಟು ಹೊತ್ತು ಮಾತನಾಡುತ್ತ ಕೂರುತ್ತಾರೆ. ಆ ಮಾತುಕತೆಯ ಉತ್ತರಾರ್ಧ ಅವರಿಬ್ಬರಲ್ಲಿ ಯಾರಾದರೊಬ್ಬರ ಮನೆಯಲ್ಲಿ ಮುಂದುವರಿಯುವುದಿದೆ. ಇರಲಿ.

ರಾಮಾನುಜಂ ಬೆಳೆದುದು ತಮಿಳುನಾಡಿನ ಒಂದು ಹಳ್ಳಿಯಲ್ಲಾದರೂ ಅವರ ಪೂರ್ವಜರು ತೆಲುಗು ಮನೆಮಾತಿನವರು. ಆಂಧ್ರ ಮೂಲದ ಸಂಪರ್ಕ ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಅವರ ಅಂತರರಾಜ್ಯ ವ್ಯಕ್ತಿತ್ವದ ಪರಿಚಯ ಇಷ್ಟಕ್ಕೇ ಮುಗಿಯುವುದಿಲ್ಲ. ತಮ್ಮ ಸೇವಾವಧಿಯಲ್ಲಿ ಹದಿನೆಂಟು ಇಪ್ಪತ್ತು ವರ್ಷ ಮುಂಬಯಿಯಲ್ಲಿ ಕೆಲಸ ಮಾಡಿದ್ದಾರೆ. ಈಗಲೂ ಕಾರ್ಯನಿಮಿತ್ತವಾಗಿ ಉತ್ತರಭಾರತ, ಈಶಾನ್ಯ ಭಾರತ ಎಂದೆಲ್ಲ ಓಡಾಡುತ್ತಾರೆ. ಕಳೆದ ವಾರ ಸಿಕ್ಕಾಗ ಅವರು ತಮ್ಮ ಸಂಬಂಧಿಕರೊಬ್ಬರು ಹೇಳಿದ ಕಥೆಯನ್ನು ಯಾವುದೋ ಮಾತಿನ ಸಂದರ್ಭದಲ್ಲಿ ನೆನಸಿಕೊಂಡರು.

ಆ ಕಥೆಯನ್ನು ರಾಮಾನುಜಂ ಅವರ ಸಂಬಂಧಿಕ ರಾಘವನ್ ಅವರಿಗೆ ಹೇಳಿದ್ದು ಶ್ರೀನಿವಾಸನ್. ರಾಘವನ್ ಅವರು ರಾಮಾನುಜಂರ ಉಪನಯನದ ಹೊತ್ತಿಗೆ ಅವರ ಮನೆಗೆ ಬಂದಾಗ ಸಾಯಂಕಾಲ ಈ ಕಥೆಯನ್ನು ಹೇಳಿದರು. ಆ ಸಂದರ್ಭ ರಾಮಾನುಜಂರ ಕಣ್ಣಿಗೆ ಕಟ್ಟಿದಂತಿದೆ.

ಸಂಪ್ರದಾಯದಂತೆ ಉಪನಯನದ ಎಲ್ಲಾ ವಿಧಿಗಳನ್ನು ಪೂರೈಸಿ ಮನೆಯ ಜನರು, ತೀರಾ ಹತ್ತಿರದ ಸಂಬಂಧಿಕರು ಇಷ್ಟೇ ಜನ ಆ ಸಂಜೆ ರಾಮಾನುಜಂ ಅವರ ಮನೆಯಲ್ಲಿ ಉಳಿದಿದ್ದರು. ಹಾಗೆಂದರೂ ಹದಿನೈದಿಪ್ಪತ್ತು ಜನರು ಇದ್ದರು. ರಾಮಾನುಜಂರ ಜೊತೆ ಕೂತು ಸಂಧ್ಯಾವಂದನೆಯ ಕ್ರಮಗಳನ್ನೆಲ್ಲ ಚಾಚೂತಪ್ಪದೆ ಹೇಳಿಕೊಟ್ಟರು. ಆಗ ರಾಘವನ್ ಸಹ ಅಲ್ಲೇ ಇದ್ದರು. ಆಸಕ್ತಿಯಿಂದ ಶಾಸ್ತ್ರಿಗಳ ಶ್ರದ್ಧಾಪೂರ್ಣ ಪಾಠವನ್ನು ಗಮನಿಸುತ್ತಿದ್ದರು. ಸಂಧ್ಯಾವಂದನೆ ಮುಗಿದ ಮೇಲೆ ಶಾಸ್ತ್ರಿಗಳ ಪರಿಚಯವನ್ನೂ ಮಾಡಿಕೊಂಡರು. ತುಂಬಾ ವಿನಯದಿಂದ ರಾಘವನ್ ಅವರು ಶಾಸ್ತ್ರಿಗಳ ಹತ್ತಿರ 'ಒಂದು ಪ್ರಶ್ನೆ ಕೇಳಬಹುದೇ?' ಎಂದರು.

'ಅಯ್ಯೋ, ಅದಕ್ಕೇನಂತೆ, ನನಗೆ ಗೊತ್ತಿದ್ದರೆ ಹೇಳುತ್ತೇನೆ' ಎಂದರು ಶಾಸ್ತ್ರಿಗಳು. ಅದು ಅವರ ಸುಶೀಲ ಸ್ವಭಾವ.

'ಅದಕ್ಕೂ ಪೂರ್ವದಲ್ಲಿ ನಾನು ನಿಮಗೊಂದು ಕಥೆ ಹೇಳಬೇಕು' ಎಂದರು ರಾಘವನ್.

'ಕಥೆಯೇ? ಅಗತ್ಯವಾಗಿ ಹೇಳಿ. ನನಗೂ ಕಥೆ ಎಂದರೆ ತುಂಬ ಇಷ್ಟ' ಎನ್ನುತ್ತಾ ಶಾಸ್ತ್ರಿಗಳು ಉಟ್ಟ ಮಡಿ ಸರಿ ಮಾಡಿಕೊಂಡು ಕೂತರು.

ಕಥೆ ಯಾರಿಗೆ ಇಷ್ಟವಿಲ್ಲ ಹೇಳಿ? ಮನೆಯಲ್ಲಿದ್ದವರೆಲ್ಲಾ ನೆರೆದರು. ಆದರೆ ಆ ಕಾರ್ಯಕ್ರಮಕ್ಕೆ ಕೇಶವಲು ಒಂದು ಸಣ್ಣ ನಿಲುಗಡೆ ತಂದರು.

'ಅಡುಗೆಗೆ ಬಂದವರು ದಣಿದಿದ್ದಾರೆ. ನಾವು ಊಟ ಮುಗಿಸಿಬಿಟ್ಟರೆ ಅವರಿಗೂ ಮುಂದಿನ ಕೆಲಸ ಮಾಡಿಕೊಳ್ಳಲು ಅನುಕೂಲ. ಶಾಸ್ತ್ರಿಗಳದು ಹೇಗಿದ್ದರೂ ಫಲಾಹಾರ. ನೀವೂ ಇಲ್ಲೇ ಇವತ್ತಿನ ಫಲಾಹಾರ ಮುಗಿಸಿ. ಅದೇ ಹೊತ್ತಿಗೆ ನಮ್ಮ ಊಟವೂ ಮುಗಿಯುತ್ತದೆ. ಆಮೇಲೆ ಎಷ್ಟು ಹೊತ್ತು ಬೇಕಾದರೂ ಕಥೆ ಹೇಳುತ್ತ, ಕೇಳುತ್ತ ಕೂರಬಹುದು'.

ಯಜಮಾನರ ಮಾತು ಎಲ್ಲರಿಗೂ ಸಮ್ಮತವೆನಿಸಿತು. ಸಂಪ್ರದಾಯಸ್ಥ ಮನೆಗಳಲ್ಲಿ ಗಂಡಸರು ಊಟದ ಸಮಯದಲ್ಲಿ ಮಾತನಾಡುವುದಿಲ್ಲವಷ್ಟೆ. ಮುಂಜಿ ಆದ ಹುಡುಗನಿಗೆ ಊಟದ ಮಂತ್ರಗಳನ್ನು ಹೇಳಿಕೊಡುವಷ್ಟರ ಮಟ್ಟಿಗೆ ಮಾತ್ರ ಮಾತು, ಆ ಬಳಿಕ ಶಾಂತವಾಗಿ, ಬಹು ವೇಗವಾಗಿ ಊಟ ಮುಗಿಯಿತು. ಯಾರಿಗೂ ಹೊಟ್ಟೆ ತೀರ ಹಸಿದಿರಲಿಲ್ಲ.

ಹೊರ ಅಂಗಳದಲ್ಲಿ ಚಾಪೆ, ಕಂಬಳಿ ಹಾಸಿಕೊಂಡು ಎಲ್ಲರೂ ಕೂತರು. ರಾಘವನ್ ಅವರ ಕಥೆಗಾಗಿಯೇ ಎಲ್ಲರೂ ಹಸಿದಿದ್ದರೆನ್ನಬೇಕು. ಇಷ್ಟು ಹೊತ್ತಾದರೂ ರಾಘವನ್ ಯಾರು ಎಂದು ಹೇಳಲೇ ಇಲ್ಲ, ಅಲ್ಲವೇ? ಅವರು ತಿರುಚ್ಚಿಯಲ್ಲಿ ಪೋಸ್ಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಅವರದೂ ಕೇಶವಲು ಅವರದೂ ಆಂಧ್ರದ ಮೂಲದಲ್ಲಿ ಒಂದೇ ಊರು. ಯಾಕೆ, ಒಂದೇ ಗೋತ್ರದವರೂ ಹೌದು.

'ಇನ್ನು ಕಥೆ ಶುರುವಾಗಲಿ' ಎಂದು ಯಾರೋ ಹೇಳಿದರು. ಯಾರೋ ಏನು, ಎಲ್ಲರ ಮನಸಿನಲ್ಲೂ ಇದ್ದ ಆಸೆ ಅದು.

'ಹಾಗೆ ನೋಡಿದರೆ, ನನಗೆ ಈ ಕಥೆಯನ್ನು ಹೇಳಿದ್ದು ಶ್ರೀನಿವಾಸನ್' ಎಂದು ರಾಘವನ್ ಪೀಠಿಕೆ ಹಾಕಿದರು.

'ಶ್ರೀನಿವಾಸನ್ ಯಾರು?' ಎಂದರು ವೆಂಕಟಗಿರಿ ಶಾಸ್ತ್ರಿಗಳು.

'ನಿನ್ನ ಭಾವ ಶ್ರೀನಿವಾಸನ್ ಇರಬೇಕು, ಊರಲ್ಲಿ ಕೋ ಆಪರೇಟಿವ್ ಬ್ಯಾಂಕಲ್ಲಿ ಇದ್ದಾನಲ್ಲ ಅವನೇ ಎಂದು ಕಾಣುತ್ತದೆ, ಸರಿ ತಾನೇ?' ಎಂದರು ಕೇಶವಲು.

'ಶ್ರೀನಿವಾಸನ್ ಅಂದರೆ ನನ್ನ ಹಿರಿಯಕ್ಕನ ಕಿರಿ ಮಗ.